ಕರ್ನಾಟಕ ಸರ್ಕಾರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಆಯುಕ್ತರ ಕಛೇರಿ, ನಂ.16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ,
ಮಿಲ್ಲರ್ಸ್ ಕೆರೆ ಅಂಗಳ, ವಸಂತನಗರ, ಬೆಂಗಳೂರು–52.

ಸಂ:ಹಿಂವಕಇ/ತ–3/ವಿವ್ಯಾವೇ/ಸಿಆರ್–02/2019–20 ದಿನಾಂಕ:18/09/2019

## ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಸೂಚನೆಗಳು (Instructions to Candidates)

**(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಆಯಾ ಇಲಾಖೆಯಿಂದ ಈ ಸೌಲಭ್ಯವನ್ನು ನೀಡುತ್ತಿರುವ ಕಾರಣ ಆಯಾ ಇಲಾಖೆಯನ್ನು ಸಂಪರ್ಕಿಸುವುದು)**

ಭಾರತ ದೇಶದ ಪ್ರಜೆಯಾಗಿದ್ದು, ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

1. ಕೇಂದ್ರ/ರಾಜ್ಯ ಸರ್ಕಾರದ/ಅನುದಾನಿತ ಸಂಸ್ಥೆಗಳ/ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳಲ್ಲಿನ ನೌಕರರು ಸದರಿ ಕಾರ್ಯಕ್ರಮದಡಿ ಅರ್ಜಿ ಸಲ್ಲಿಸಲು ಮತ್ತು ಧನಸಹಾಯ ಪಡೆಯಲು ಅರ್ಹರಿರುವುದಿಲ್ಲ.
2. ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–I, II(ಎ), III(ಎ) ಹಾಗೂ III(ಬಿ) ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳು ಮಾತ್ರ online ಮೂಲಕ ಅರ್ಜಿಗಳನ್ನು ಸಲ್ಲಿಸುವುದು.
3. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿರುವ ದಾಖಲೆಗಳ ಒಂದು ಸೇಟ್ ಧೃಢೀಕೃತ ಜೆರಾಕ್ಸ್ ಪ್ರತಿ ಹಾಗೂ ಮೂಲ ದಾಖಲೆಗಳೊಂದಿಗೆ ಆಯಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಹಾಜರಾಗಿ ದಾಖಲೆಗಳ ಪರಿಶೀಲನೆ ಮಾಡಿಸಿಕೊಳ್ಳುವುದು ಹಾಗೂ ದಾಖಲೆಗಳ ಪರಿಶೀಲನೆಯ ನಂತರ ಮೂಲ ಪ್ರತಿಗಳನ್ನು ಹಿಂದಕ್ಕೆ ಪಡೆದುಕೊಳ್ಳುವುದು.
4. 2019–20ನೇ ಸಾಲಿನ ಅರ್ಥಿಕ ವರ್ಷ (ಏಪ್ರಿಲ್1, 2019 ರಿಂದ ಮಾರ್ಚ್31, 2020)ದಲ್ಲಿ ವಿದೇಶದಲ್ಲಿ ಪ್ರಥಮ ವರ್ಷದ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ಮಾತ್ರ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಸೌಲಭ್ಯ ಒದಗಿಸಲಾಗುವುದು.
5. **ನಿಗದಿಪಡಿಸಿರುವ ಅರ್ಹತೆಗಳು:**
   1. ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್.ಡಿ ಮಾಡುವ ವಿದ್ಯಾರ್ಥಿಗಳು ತಮ್ಮ ಹಿಂದಿನ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.70 ಅಂಕಗಳು ಅಥವಾ ಸಮಾನವಾದ ಗ್ರೇಡ್ ಪಡೆದಿರಬೇಕು.(ಎಲ್ಲಾ ಶೈಕ್ಷಣಿಕ ವರ್ಷಗಳನ್ನು ಒಳಗೊಂಡಂತೆ ಸರಾಸರಿ ಅಂಕಗಳು/ಗ್ರೇಡ್‌ಅನ್ನು ಪರಿಗಣಿಸಲಾಗುವುದು).
   2. ವಯೋಮಿತಿ–ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ:15.10.2019 ಕ್ಕೆ ಅನ್ವಯಿಸುವಂತೆ ಪಿಎಚ್.ಡಿ ಮಾಡುವ ಅಭ್ಯರ್ಥಿಗಳು 27 ವರ್ಷದ ವಯೋಮಿತಿಯೊಳಗಿರಬೇಕು ಹಾಗೂ ಸ್ನಾತಕೋತ್ತರ ಪದವಿ ಮಾಡುವ ಅಭ್ಯರ್ಥಿಗಳು 25 ವರ್ಷದ ವಯೋಮಿತಿಯೊಳಗಿರಬೇಕು.
   3. ಆದಾಯ ಮಿತಿ– ವಿದ್ಯಾರ್ಥಿಯ ಹಾಗೂ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.6.00 ಲಕ್ಷದ ಮಿತಿಯೊಳಗಿರಬೇಕು.

4. ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯವನ್ನು 2018–19 ನೇ ಸಾಲಿಗೆ ಸಂಬಂಧಿಸಿದಂತೆ ಪರಿಗಣಿಸಲಾಗುವುದು, ಅಭ್ಯರ್ಥಿಯು ತಹಶೀಲ್ದಾರ್ ಕಛೇರಿಯಿಂದ ತನ್ನ ಹೆಸರಿನಲ್ಲಿ ಪಡೆದು, ಸಲ್ಲಿಸುವ ಆದಾಯ ಪ್ರಮಾಣ ಪತ್ರವನ್ನು ಏಪ್ರಿಲ್ 1, 2019 ರ ನಂತರದ ದಿನಾಂಕದಲ್ಲಿ ಇರುವಂತೆ ಪಡೆದು ಸಲ್ಲಿಸುವುದು.
5. a).GMAT, b).TOEFL, c).GRE, d).IELTS, e).SAT ಐದರಲ್ಲಿ ಯಾವುದಾದರೂ ಒಂದು ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ತೇರ್ಗಡೆಯಾಗಿರಬೇಕು.
6. 2019-20ನೇ ಸಾಲಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು Top One Thousand Global University Ranking ಹೊಂದಿರುವ ವಿದೇಶಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರಬೇಕು ಹಾಗೂ ವಿಶ್ವ ವಿದ್ಯಾಲಯದಿಂದ ನೀಡಿರುವ Offer Letter/I-20 ಹೊಂದಿರಬೇಕು (ವಿದೇಶಿ ವಿಶ್ವವಿದ್ಯಾಲಯಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ).
7. ಅಭ್ಯರ್ಥಿ ಹಾಗೂ ಅಭ್ಯರ್ಥಿಯ ತಂದೆ /ತಾಯಿ/ಪೋಷಕರ PAN no. ನ್ನು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವುದು.
8. ವಾಸಸ್ಥಳ ದೃಢೀಕರಣ ಪತ್ರ ಸಲ್ಲಿಸುವುದು. ಅಭ್ಯರ್ಥಿಯು ತನ್ನ ಹೆಸರಿನಲ್ಲಿ ತಹಶೀಲ್ದಾರರಿಂದ ಪಡೆದಿರಬೇಕು.
9. ಒಂದು ಕುಟುಂಬದ ಒಬ್ಬ ವಿದ್ಯಾರ್ಥಿಗೆ (ತಂದೆ–ತಾಯಿ/ಪೋಷಕರ ಒಂದು ಸಂತಾನಕ್ಕೆ) ಒಂದು ಬಾರಿಗೆ ಮಾತ್ರ ಈ ಧನಸಹಾಯವನ್ನು ನೀಡಲಾಗುವುದು.

6. ಧನ ಸಹಾಯದ ಮೊತ್ತ–ವಾರ್ಷಿಕವಾಗಿ ಗರಿಷ್ಠ ರೂ.10.00 ಲಕ್ಷ ಅಥವಾ ವಾಸ್ತವ ವೆಚ್ಚ ಇವೆರಡಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು.

7. ಧನ ಸಹಾಯದ ಅವಧಿ :-

- ಸ್ನಾತಕೋತ್ತರ ಪದವಿ – ಗರಿಷ್ಠ 2 ವರ್ಷ ಅಥವಾ ಕೋರ್ಸ್ ಮುಕ್ತಾಯದ ಅವಧಿಯಲ್ಲಿ ಯಾವುದು ಮೊದಲೋ ಆ ಅವಧಿಯನ್ನು ಪರಿಗಣಿಸಲಾಗುವುದು.
- ಪಿಎಚ್.ಡಿ – ಗರಿಷ್ಠ 3 ವರ್ಷ ಅಥವಾ ಕೋರ್ಸ್ ಮುಕ್ತಾಯದ ಅವಧಿಯಲ್ಲಿ ಯಾವುದು ಮೊದಲೋ ಆ ಅವಧಿಯನ್ನು ಪರಿಗಣಿಸಲಾಗುವುದು.

8. ಧನಸಹಾಯ ಪಾವತಿ ವಿಧಾನ –

- ಆಯ್ಕೆಯಾದ ವಿದ್ಯಾರ್ಥಿಯು ಮೊದಲನೇ ವರ್ಷದ ಧನ ಸಹಾಯವನ್ನು ಪಡೆಯಲು ವೀಸಾ, ಪಾಸ್‌ಪೋರ್ಟ್ ಪ್ರತಿ ಮತ್ತು ಸಂಬಂಧಿತ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಹಾಗೂ ಇತರೆ ಅಗತ್ಯ ದಾಖಲೆಗಳನ್ನು ಒದಗಿಸಬೇಕು.
- ಎರಡು/ಮೂರನೇ ವರ್ಷದ ಧನ ಸಹಾಯವನ್ನು ನಿಯಮಾನುಸಾರ ಪಡೆಯಲು ಸಂಬಂಧಿತ ವಿಶ್ವವಿದ್ಯಾಲಯಗಳಿಂದ ಪ್ರಗತಿ ವರದಿಯನ್ನು, ವೆಚ್ಚದ ವಿವರಗಳನ್ನು ಹಾಗೂ ಇಲಾಖೆ ಕೋರುವ ಇತರೆ ದಾಖಲೆಗಳನ್ನು ಸಲ್ಲಿಸುವುದು.
- ಅಂತಿಮ ವರ್ಷದ ವ್ಯಾಸಂಗದ ಅವಧಿಯು ಆರು ತಿಂಗಳಿಗಿಂತ ಕಡಿಮೆಯಾಗಿದ್ದಲ್ಲಿ ಶೇ.50 ರಷ್ಟು ಮೊತ್ತವನ್ನು ಅಥವಾ ವಾಸ್ತವ ವೆಚ್ಚ ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಆ ವರ್ಷಕ್ಕೆ ನೀಡಲಾಗುವುದು.

9. ಆಯ್ಕೆ ವಿಧಾನ – ಮೂರು ಹಂತಗಳನ್ನು ಒಳಗೊಂಡಿದೆ.

- ವಿದ್ಯಾರ್ಥಿಯಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ.

- ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಮೂಲ ದಾಖಲೆಗಳ ಪರಿಶೀಲನೆ ಮತ್ತು ಮನೆ ಭೇಟಿ ಮಾಡಿ ಸ್ಥಳ ಪರಿಶೀಲನೆ.
- ಸರ್ಕಾರದ ಕಾರ್ಯದರ್ಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಆಯ್ಕೆ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂದರ್ಶನ.

10. ನಿಗದಿಪಡಿಸಿರುವ ಮೀಸಲಾತಿ –

| ಕ್ರ. ಸಂ. | ಪ್ರವರ್ಗ | ಶೇಕಡವಾರು |
|---|---|---|
| 1 | 1 | 24% |
| 2 | 2ಎ | 46% |
| 3 | 3ಎ | 14% |
| 4 | 3ಬಿ | 16% |
| | ಒಟ್ಟು | 100% |

11. ಆನ್‌ಲೈನ್ ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಸಲ್ಲಿಸುವುದು

- ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ.
- ದ್ವಿ.ತಿ.ಯ ಪಿ.ಯು.ಸಿ/12ನೇ ತರಗತಿಯ ಅಂಕಪಟ್ಟಿ
- ಜಾತಿ ಮತ್ತು ಆದಾಯ ದೃಢೀಕರಣ ಪತ್ರ (ತಹಶೀಲ್ದಾರರಿಂದ ಪಡೆದಿರಬೇಕು ಹಾಗೂ ಪ್ರಮಾಣ ಪತ್ರವು ಅಭ್ಯರ್ಥಿಯ ಹೆಸರಿನಲ್ಲಿರಬೇಕು)
- ವಾಸಸ್ಥಳ ದೃಢೀಕರಣ ಪತ್ರ (ತಹಶೀಲ್ದಾರರಿಂದ ಪಡೆದಿರಬೇಕು ಹಾಗೂ ಪ್ರಮಾಣ ಪತ್ರವು ಅಭ್ಯರ್ಥಿಯ ಹೆಸರಿನಲ್ಲಿರಬೇಕು)
- ಪದವಿ/ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳು
- 1ನೇ ತರಗತಿಯಿಂದ ಪದವಿಯವರೆಗೆ ಅಧ್ಯಯನ ಮಾಡಿರುವ ಬಗ್ಗೆ ಸಂಬಂಧಿತ ಸಂಸ್ಥೆಗಳಿಂದ ವ್ಯಾಸಂಗ ಪ್ರಮಾಣ ಪತ್ರ.
- ಪಾನ್ ಕಾರ್ಡ್
- ಪಾಸ್‌ಪೋರ್ಟ್.
- ವೀಸಾ (ಲಭ್ಯವಿದ್ದಲ್ಲಿ).
- ಸಂಬಂಧಪಟ್ಟ ವಿದೇಶಿ ವಿಶ್ವವಿದ್ಯಾಲಯ/ಸಂಸ್ಥೆಯಲ್ಲಿ ಪ್ರವೇಶ ಪಡೆಯಲು ವಿಶ್ವವಿದ್ಯಾಲಯದಿಂದ ನೀಡಿರುವ Offer Letter/I-20 ದಾಖಲೆ.
- ಕೋರ್ಸ್ ಅವಧಿಗೆ ತಗಲುವ ವೆಚ್ಚದ ವಿವರ.
- ಘಟಿಕೋತ್ಸವ ಪ್ರಮಾಣ ಪತ್ರ/ತಾತ್ಕಾಲಿಕ ಪದವಿ ಪ್ರಮಾಣ ಪತ್ರ (Convocation Certificate/Provisional Degree/ Master Degree Certificate).
- a) GMAT,b) TOEFL, c) GRE d)IELTS, e)SAT ಈ ಐದರಲ್ಲಿ ಯಾವುದಾದರು ಒಂದು ಪ್ರವೇಶ ಪರೀಕ್ಷೆ ತೇರ್ಗಡೆಯಾಗಿರುವ ಬಗ್ಗೆ ಪ್ರಮಾಣ ಪತ್ರ.

12. ಇತರೆ ಷರತ್ತುಗಳು –

1. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶವನ್ನು ಪಡೆಯುವುದು, ವೀಸಾ ಪಡೆಯುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿರುತ್ತದೆ.
2. ಪ್ರತಿ ವರ್ಷ ಸಹ ಹೊಸ ಕೋರ್ಸ್‌ಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೇರಿಕೆಯಾಗುವ ಹಿನ್ನೆಲೆಯಲ್ಲಿ ಕೋರ್ಸ್‌ಗಳನ್ನು ಒಟ್ಟಾರೆಯಾಗಿ ತಾಂತ್ರಿಕ ಮತ್ತು ತಾಂತ್ರಿಕೇತರ ಕೋರ್ಸ್‌ಗಳಾಗಿ ವಿಂಗಡಿಸಲಾಗುವುದು (ಅಭ್ಯರ್ಥಿಯು ವಿದೇಶದಲ್ಲಿ ವ್ಯಾಸಂಗ ಮಾಡುವ ಕೋರ್ಸ್‌ಗೆ ಸಂಬಂಧಿಸಿದಂತೆ)
3. ಅಭ್ಯರ್ಥಿಯು ಈ ಹಿಂದೆ/ಹಾಲಿ ಯಾವುದಾದರೂ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ/ಕೆಲಸ ಮಾಡಿದ್ದಲ್ಲಿ, ಸದರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿರುವ ಕಾಲಾವಧಿಯ ವಿವರ ಹಾಗೂ ಸದರಿ ಸಂಸ್ಥೆಯಲ್ಲಿ ಪಡೆದ ವೇತನದ ವಿವರಗಳು ಹಾಗೂ ಆ ಸಾಲಿನಲ್ಲಿ ಪಾವತಿಸಿದ ಆದಾಯ ತೆರಿಗೆಯ ವಿವರಗನ್ನು ಕಡ್ಡಾಯವಾಗಿ ನಮೂದಿಸುವುದು.
4. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ವೃತ್ತಿ ಹಾಗೂ ವೃತ್ತಿಯಿಂದ ಬಂದಿರುವ ಆದಾಯ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ಕಳೆದ ವರ್ಷದ ಅಂದರೆ 2018–19 ನೇ ಸಾಲಿನ ಆರ್ಥಿಕ ವರ್ಷದ ಆದಾಯ ತೆರಿಗೆ ಪಾವತಿಯ ಪ್ರಮಾಣ ಪತ್ರ (IT Returns 2018-19 Financial year or 2019-20 Assessment year)ವನ್ನು ಕಡ್ಡಾಯವಾಗಿ ಸಲ್ಲಿಸುವುದು. (ಆದಾಯ ತೆರಿಗೆ ಪಾವತಿಸಿಲ್ಲದಿದ್ದಲ್ಲಿ ಕಾರಣ ತಿಳಿಸುವುದು)
5. ಅಭ್ಯರ್ಥಿಯು ಸದರಿ ವಿದೇಶಿ ವ್ಯಾಸಂಗ ವೇತನಕ್ಕೆ ಸಂಬಂಧಿಸಿದಂತೆ ಯಾವುದಾದರೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್/ಖಾಸಗಿ ಬ್ಯಾಂಕ್‌ನಿಂದ ಲೋನ್ ಪಡೆದಿದ್ದಲ್ಲಿ ಅಥವಾ ಯಾವುದಾದರೂ ಸಂಸ್ಥೆಯಿಂದ ಧನಸಹಾಯ ಪಡೆದಿದ್ದಲ್ಲಿ ಸದರಿ ವಿವರವನ್ನು ಕಡ್ಡಾಯವಾಗಿ ನೀಡುವುದು ಹಾಗೂ ಸಂಬಂಧಿತ ದಾಖಲೆಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯವಾಗಿ ಅಪ್ಲೋಡ್ ಮಾಡುವುದು.
6. ಅಭ್ಯರ್ಥಿಯು ಆಯ್ಕೆ ಮಾಡಿಕೊಂಡಿರುವ ಕೋರ್ಸ್ ಪ್ರಾರಂಭವಾಗುವ ದಿನಾಂಕ ಅಭ್ಯರ್ಥಿಯು ವಿದೇಶಕ್ಕೆ ತೆರಳುವ ದಿನಾಂಕ ಹಾಗೂ ಕೋರ್ಸ್ ಮುಕ್ತಾಯವಾಗುವ ಅಂದಾಜು ದಿನಾಂಕದ ವಿವರಗಳನ್ನು ನೀಡುವುದು.
7. ವಿದೇಶಿ ವ್ಯಾಸಂಗ ವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಂಬಂಧಿತ ವಿಶ್ವವಿದ್ಯಾಲಯ/ ಸಂಸ್ಥೆಗೆ ಪ್ರವೇಶ ಪಡೆಯಬೇಕು ಹಾಗೂ 2019–20 ರ ಆ ವರ್ಷದಲ್ಲಿ ಕೋರ್ಸ್ ಪ್ರಾರಂಭಿಸಬೇಕು.
8. ಭಾರತ ಸರ್ಕಾರವು ಸೌಹಾರ್ದಯುತ ಸಂಬಂಧವನ್ನು ಹೊಂದಿರುವ ದೇಶಗಳಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶವನ್ನು ಪಡೆಯತಕ್ಕದ್ದು.
9. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ವಿಧಿಸುವ ಷರತ್ತುಗಳಿಗೆ ಬದ್ಧರಾಗಿರುವ ಬಗ್ಗೆ ಈ ಹಿಂದೆ ತನ್ನ ಕುಟುಂಬದಿಂದ ಯಾವುದೇ ವ್ಯಕ್ತಿಯು ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಕಾರ್ಯಕ್ರಮದಡಿ ಸೌಲಭ್ಯ ಪಡೆದಿರುವುದಿಲ್ಲ ಹಾಗೂ ಆನ್‌ಲೈನ್ ನಲ್ಲಿ ಸಲ್ಲಿಸಿರುವ ಎಲ್ಲಾ ಮಾಹಿತಿಯು ಸರಿಯಾಗಿದೆ ಎಂದು ರೂ.100/– ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡುವುದು.
10. ವಿದ್ಯಾರ್ಥಿಯು ಅರ್ಧದಲ್ಲೇ ವ್ಯಾಸಂಗವನ್ನು ಮೊಟಕುಗೊಳಿಸಿದಲ್ಲಿ ಧನ ಸಹಾಯದ ಮೊತ್ತವನ್ನು ಮರು ಪಾವತಿಸುವ ಬಗ್ಗೆ ಹಿಡುವಳಿದಾರರಿಂದ ಅಥವಾ ಸರ್ಕಾರಿ ನೌಕರರಿಂದ ಜಾಮೀನು ಪತ್ರವನ್ನು ಸಲ್ಲಿಸತಕ್ಕದ್ದು.

11. ವಿದೇಶಿ ವ್ಯಾಸಂಗ ವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಯು ಕೋರ್ಸ್/ವಿಷಯವನ್ನು ನಂತರದಲ್ಲಿ ಬದಲಾಯಿಸುವಂತಿಲ್ಲ.
12. ವಿದ್ಯಾರ್ಥಿಗೆ ತಗಲಿರುವ ವಾಸ್ತವ ವೆಚ್ಚಕ್ಕಿಂತ ಧನ ಸಹಾಯದ ಮೊತ್ತ ಹೆಚ್ಚಾಗಿದ್ದಲ್ಲಿ, ಆ ಮೊತ್ತವನ್ನು ಸಂಬಂಧಪಟ್ಟ ವಿದ್ಯಾರ್ಥಿಯು ಸರ್ಕಾರಕ್ಕೆ ಮರು ಪಾವತಿಸಲು ಬದ್ಧವಾಗಿರತಕ್ಕದ್ದು.
13. ನವೀಕರಣ ವಿದ್ಯಾರ್ಥಿಗಳು ಪ್ರತಿ ವರ್ಷದ ಪ್ರಗತಿ ವರದಿಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಪಡೆದು, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸುವುದು.
14. ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ವಿಶ್ವವಿದ್ಯಾಲಯ/ಸಂಸ್ಥೆಗಳ ಬದಲಾವಣೆಗೆ ಅವಕಾಶವಿರುತ್ತದೆ. (ಪಿ.ಹೆಚ್.ಡಿ ಗೆ ಮಾತ್ರ)
    - ವಿದ್ಯಾರ್ಥಿಯ ಮಾರ್ಗದರ್ಶಕರು ವಿಶ್ವವಿದ್ಯಾಲಯ/ಸಂಸ್ಥೆಯನ್ನು ಬಿಟ್ಟು ಹೋದ ಸಂದರ್ಭದಲ್ಲಿ ಸದರಿ ವಿಶ್ವವಿದ್ಯಾಲಯ/ಸಂಸ್ಥೆಯಲ್ಲಿ ಪರ್ಯಾಯ ವ್ಯವಸ್ಥೆ ಇಲ್ಲದೇ ಇದ್ದಲ್ಲಿ.
    - ವಿಶ್ವವಿದ್ಯಾಲಯ/ಸಂಸ್ಥೆಯು ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಸೌಲಭ್ಯವನ್ನು ಸ್ಥಗಿತಗೊಳಿಸಿದಲ್ಲಿ.
15. ವಿದ್ಯಾರ್ಥಿಯು ತನ್ನ ವ್ಯಾಸಂಗವು ಮುಕ್ತಾಯಗೊಂಡ ಬಳಿಕ ಕೋರ್ಸ್ ಮುಕ್ತಾಯಗೊಂಡ ಬಗ್ಗೆ ವರದಿಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯ/ಸಂಸ್ಥೆಗಳಿಂದ ಪಡೆದು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುವುದು.
16. ವಿದ್ಯಾರ್ಥಿಗಳು ತಮಗೆ ಉದ್ಯೋಗ ದೊರೆತ ಬಳಿಕ ಮಾಹಿತಿಯನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುವುದು.
17. ಈ ಕೆಳಗಿನ ಸಂದರ್ಭಗಳಲ್ಲಿ ವಿದ್ಯಾರ್ಥಿಗೆ ನೀಡಲಾಗುವ ಧನ ಸಹಾಯವನ್ನು ಸ್ಥಗಿತಗೊಳಿಸಿ, ನೀಡಲಾದ ಧನ ಸಹಾಯದ ಮೊತ್ತವನ್ನು ವರ್ಷಿಕ ಶೇ.15 ರ ಬಡ್ಡಿ ದರದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿ/ಜಾಮೀನುದಾರರಿಂದ ವಸೂಲಿ ಮಾಡಲಾಗುವುದು.

- ಧನ ಸಹಾಯವನ್ನು ಪಡೆಯುವ ವಿದ್ಯಾರ್ಥಿಯು ಅರ್ಧದಲ್ಲೇ ವ್ಯಾಸಂಗವನ್ನು ಮೊಟಕುಗೊಳಿಸಿದಲ್ಲಿ
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ವಿಧಿಸುವ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ
- ಸಂಬಂಧಪಟ್ಟ ವಿಶ್ವವಿದ್ಯಾಲಯ/ಸಂಸ್ಥೆಯು ವಿದ್ಯಾರ್ಥಿಯ ದುರ್ನಡತೆಯ ಬಗ್ಗೆ ಮಾಹಿತಿ ನೀಡಿದಲ್ಲಿ
- ವಿದ್ಯಾರ್ಥಿಯು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ,ಅನುಮತಿ ಪಡೆಯದೇ ಕೋರ್ಸ್/ವಿಶ್ವವಿದ್ಯಾಲಯ/ಸಂಸ್ಥೆಗಳನ್ನು ಬದಲಾಯಿಸಿಕೊಂಡಲ್ಲಿ
- ವಿದ್ಯಾರ್ಥಿಯು ವಾರ್ಷಿಕ ಪ್ರಗತಿ ವರದಿಯನ್ನು ಸಲ್ಲಿಸದೇ ಇದ್ದಲ್ಲಿ.

18. 6 ತಿಂಗಳ ಒಳಗೆ ಬಡ್ಡಿಯೊಂದಿಗೆ ಧನ ಸಹಾಯದ ಮೊತ್ತವನ್ನು ವಿದ್ಯಾರ್ಥಿ/ಜಾಮೀನುದಾರರು ಮರುಪಾವತಿ ಮಾಡದೇ ಇದ್ದಲ್ಲಿ, ಬಡ್ಡಿಯ ದರವನ್ನು ವಾರ್ಷಿಕ ಶೇ.15 ರಿಂದ ಶೇ.17.5 ಕ್ಕೆ ಹೆಚ್ಚಿಸಲಾಗುವುದು.
19. ಒಂದು ವೇಳೆ ಸರ್ಕಾರಕ್ಕೆ ಸದರಿ ವೆಚ್ಚವನ್ನು ಹಿಂದಿರುಗಿಸದೇ ಇದ್ದಲ್ಲಿ, ರಾಜ್ಯ ಸರ್ಕಾರದಿಂದ ಇದನ್ನು ಭೂ ಕಂದಾಯ ಬಾಕಿ ಎಂಬುದಾಗಿ ಪರಿಗಣಿಸಿ, ವಸೂಲಿ ಮಾಡಲು ಹಾಗೂ ಕಾನೂನಿನ ರೀತ್ಯ ಕ್ರಮವನ್ನು ಜರುಗಿಸಲಾಗುವುದು.
20. ವಿದ್ಯಾರ್ಥಿಯು ತಪ್ಪು ಮಾಹಿತಿ ನೀಡಿ, ಧನ ಸಹಾಯಕ್ಕೆ ಆಯ್ಕೆಯಾಗಿದ್ದಲ್ಲಿ ಸಂಬಂಧಪಟ್ಟವರಿಂದ ನೀಡಲಾದ ಧನ ಸಹಾಯದ ಮೊತ್ತವನ್ನು ವಾರ್ಷಿಕ ಶೇ.15 ರ ಬಡ್ಡಿ ದರದಲ್ಲಿ ವಸೂಲಿ ಮಾಡಲಾಗುವುದು ಹಾಗೂ ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುವುದು.

21. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಸಲ್ಲಿಸಿರುವ ದಾಖಲೆಗಳನ್ನು ಸಂಬಂಧ ಪಟ್ಟ ಜಿಲ್ಲಾ ಅಧಿಕಾರಿಗಳಿಗೆ ಸಲ್ಲಿಸಿ ಮೂಲ ದಾಖಲೆಗಳನ್ನು ಹಾಜರುಪಡಿಸಿ ಪರಿಶೀಲಿಸಿಕೊಳ್ಳತಕ್ಕದ್ದು.
22. 2019–20 ನೇ ಸಾಲಿನ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕೆ ಭೌತಿಕ ಗುರಿಯನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ನಿಗದಿಪಡಿಸಲಾಗುವುದು.
23. ಆನ್–ಲೈನ್ ಅರ್ಜಿ ಸಲ್ಲಿಸಿದ ನಂತರ Edit and Delete Option ಇರುವುದಿಲ್ಲ, ಆದ್ದರಿಂದ ವಿದ್ಯಾರ್ಥಿಗಳಿಗೆ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದು.

Online ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.10.2019, ಸಂಜೆ 5.00 ಗಂಟೆ

ಸಹಾಯವಾಣಿ ಸಂಖ್ಯೆ: 8050770004
(ಕಛೇರಿ ಕಾರ್ಯನಿರ್ವಹಿಸುವ ಸಮಯ ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ.)

ಸಹಿ/–
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.